MSIL

Vidya©

ವಿದ್ಯಾ

DELUXE NOTE BOOK

from the makers of

Lekhak

ಬೇಂದ್ರ ಕಾವ್ಯ-4

192 Pages

Rs. 8.00

Name ________________

Class ________________

Subject ________________

School ________________

Marketed by: MSIL Mysore Sales International Limited

ದೇವರ ಹಾಡು - 8

ಅಧ್ಯಾಯ 18.

4 8

26. ನಿರಾಸಕ್ತನಾಗಿ (ಫಲಾಫಲವನ್ನು ಲೆಕ್ಕಿಸದ ಮುಕ್ತ
ಸಂಗನಾಗಿ), ಅಹಂಕೃತಿಯಿಲ್ಲದವರು ಧೈರ್ಯೋತ್ಸಾಹ
(ಹಠ, ಹುಮ್ಮಸ್ಸು)ಗಳಿಂದೊಡಗೂಡಿ, ಕೆಲಸದ ಸಫಲತೆ
-ವಿಫಲತೆಗಳಿಂದ ವಿಕೃತಿಸದೆ ಕಾರ್ಯನಿರತನಾಗಿರು
-ವವನು ಸಾತ್ವಿಕ ಕರ್ತ. ಕೆಲಸಕ್ಕೆ ಕಟ್ಟು ಬಿದ್ದು
ಬಿರುಸಿನಿಂದ ಮಾಡುವ ಕೆಲಸದಲ್ಲಿ ಸದಾ
ಫಲವನ್ನೇ ಅಪೇಕ್ಷಿಸುತ್ತಾ, ಆ ಫಲಗಳನ್ನೇ
ನೆಚ್ಚಿಕೊಂಡಿರುತ್ತಾ, ನೋವನ್ನು ಸಹ ಕೊಡಬಲ್ಲ,
28 ಮಲಿನತೆಯಿಂದಿರುವವ ಹಾಗೂ ಹರ್ಷೋದ್ವೇಗ-
ದುಃಖ ನಿರಾಶೆಗಳಿಗೆ ಸುಲಭವಾಗಿ ಪ್ರತಿಕ್ರಿಯಿಸುವವನ
ರಾಜಸ ವಿಧದ ಕರ್ತೃವೆನಿಸುತ್ತಾನೆ.
ಕೆಲಸದಲ್ಲಿ ಶ್ರದ್ಧೆಯಿಲ್ಲದವ (ನಿರಾಸಕ್ತಿಯಿಂದ
ಕೂಡಿದವ) ಅಥವಾ ಗಾಳಿಪತ್ರಿನಂತೆಯಾಗಲೀ
ಚುರುಕಿಲ್ಲದವನಾಗಲೀ, ಮೊಂಡು ಬುದ್ಧಿಯವನಾಗಲೀ
ಕುಹಕ (ಕೆಡುಕು ನಡೆ ನುಡಿ)ಗಳಿಂದವನಾಗಲೀ,
ಸದಾ ಉಸ್ಸೆಂದು ಕೊರಗುತ್ತಲೋ, ತಾನೇನು
ಮಾಡುತ್ತಿರುವೆನೆಂಬ ಪರಿವೆಯಿಲ್ಲದೆಯೋ,
ಆಲಸ್ಯದಿಂದ ಅಥವಾ ಕ್ಲೇಶಪಡುತ್ತಾ, ಬಹು
ನಿಧಾನವಾಗಿ ಕೆಲಸ ಮಾಡುವವನೇ ತಾಮಸ

ಜಾತಿಯ ಶೀಲನಿಗ.

29. ಇನ್ನು ಬುದ್ಧಿಯ ಹಾಗೂ ಧೃತಿ (ನಿಶ್ಚಿತಮತಿ)ಯ ತ್ರಿಗುಣಾತ್ಮಕವಾದ (ಮೂರು ಬಗೆಯ) ಸ್ವರೂಪಗಳು ಹೀಗಿವೆ. ಸಾತ್ತ್ವಿಕ ವಿಧದ ಬುದ್ಧಿಯು ಪ್ರವೃತ್ತಿ (ತೊಡಗುವಿಕೆ) ಹಾಗೂ ನಿವೃತ್ತಿ (ಹಿಂತೆಗೆಯುವಿಕೆ)ಗಳ ತಿಳುವಳಿಕೆಯನ್ನು, ಮಾಡಬೇಕಾದದ್ದು (ಕೃತ್ಯ) ಹಾಗೂ (ಅಕೃತ್ಯ =) ಮಾಡಬಾರದವುಗಳ ಭೇದವನ್ನು, ಅಂಜಬೇಕಾದುದರ ಹಾಗೂ ಭಯಪಡಬೇಕಾಗಿಲ್ಲದವುಗಳ ಸ್ಪಷ್ಟಜ್ಞಾನವನ್ನು, ಸಿಲುಕಿಕೊಳ್ಳುವಿಕೆ ಹಾಗೂ ಹೊರಬರುವಿಕೆಗಳ ಸಮಂಜಸ ಜ್ಞಾನವನ್ನು ಪಡೆಯುವಂಥದ್ದು.
ಮೇಲೆ ಹೇಳಿದ ದ್ವಂದ್ವಗಳ ಅಂತರವನ್ನಾಗಲೀ, ಧರ್ಮಾಧರ್ಮಗಳ ತಾರತಮ್ಯವನ್ನಾಗಲೀ ರಾಜಸ ಬಗೆಯ ಬುದ್ಧಿಯು ಅರಿಯದು.
ಅಧರ್ಮವನ್ನು ಧರ್ಮವೆಂದು ಬಗೆಯುತ್ತಲೂ, ಹೀಗೆಯೇ ಪ್ರತಿಯೊಂದನ್ನು ತಿರುವುಮುರುಗಾಗಿ (ವಿರುದ್ಧವಾಗಿ) ಗ್ರಹಿಸುತ್ತಲೂ ಇರುವ ಬುದ್ಧಿಯು ತಮಸ್ಸಿನಿಂದ ಆವೃತವಾಗಿರುವುದು.

33 ಧೃತಿಯ (=ತಾಳಿಕೊಳ್ಳುವ ಸ್ವಭಾವ ಅಥವಾ ಧೈರ್ಯದ) ಮೂರು ಬಗೆಗಳು ಹೀಗಿವೆ, —

33 ಮನಸ್ಸು, ಪ್ರಾಣ, ಕರಣಗಳಾದ ಇಂದ್ರಿಯಗಳ
ಕ್ರಿಯೆಗಳು — ಇವನ್ನು ನಿಶ್ಚಲವಾದ ಯೋಗದಿಂದ
ಯಾವುದು ನಿಯಂತ್ರಿಸಬಲ್ಲುದೋ ಆ ಧೃತಿಯು
ಸಾತ್ವಿಕವೆಂಬ ಬಗೆಯದು. ಯಾವ ಪ್ರಕಾರದ
ಧೃತಿಯಿಂದ ತನ್ನನ್ನು ನಿಲ್ಲಿಸಿಕೊಂಡಿದ್ದಾಗ್ಯೂ
ಆಯಾಯಾ ಪ್ರಸಂಗದಲ್ಲಿ ಧರ್ಮ-ಅರ್ಥ-ಕಾಮ
ಗಳ ಯಥಾರ್ಥ ಫಲವನ್ನು ಬಯಸಿ ತನ್ನ ಧೃತಿ
ಯನ್ನು ಅತ್ತಿತ್ತ ಹರಿಯಬಿಡುವನೋ ಆ ಬಗೆಯ
ಧೃತಿಯು ರಾಜಸಸ್ವಭಾವದ್ದು. ಯಾವ ಬಗೆಯ
ಧೃತಿಯನ್ನೋ ಅಧೃತಿಯನ್ನೋ ಆತುಕೊಂಡಿದ್ದರೂ
ಕನಸುಗಾಣುವಿಕೆ, ಹೆದರಿಕೆ, ದುಃಖ, ಶೋಕಗಳು,
ಸಂಕಟ, ಕ್ಲೇಶ, ಮದಗಳಿಂದ ಕೂಡಿ ಬವಣೆ
ಪಡುತ್ತಿದ್ದಾಗ್ಯೂ ಆ ಚಂಚಲತೆಯು ಅವಿವೇಕ
ಕ್ಕೆ ಅಧೀನವಾಗದಿರುವುದೋ (ಅವಿವೇಕದಿಂದಾಗಿ
ಆ 'ಧೃತಿ'/ಅಧೃತಿಯನ್ನು ಬಿಡಲಾರನೋ)
ಅದು ತಾಮಸಗುಣವನ್ನುಳ್ಳ ಧೃತಿಯ ಲಕ್ಷಣ.
36 ಸುಖದ ತ್ರಿಗುಣಾತ್ಮಿಕವಾದ ಬಗೆಗಳು ಹೀಗಿವೆ, —
ನಿರಂತರ ಅಭ್ಯಾಸ ~~[illegible]~~ ಮಾಡಿದರೆ ಯಾವುದರಲ್ಲಿಯೋ
ಆಸಕ್ತಿ (ರತಿ = ಅಭಿರುಚಿ) ಯುಂಟಾಗುವುದೋ,
ಅಂತಹ ಯಾವ ಅನುಭವದಲ್ಲಿ ದುಃಖದ ~~[illegible]~~
ದುಃಖದ

ನಾಶವನ್ನು ಸಂಪೂರ್ಣವಾಗಿ ಮರೆಯಬಹುದೋ,
ಯಾವುದು ಆರಂಭದಲ್ಲಿ ಕಹಿಯಾಗಿ (ವಿಷದಂತೆ
ಅಹಿತಕರವಾಗಿ) ತೋರಿದರೂ ಕೊನೆಗೆ (ಪರಿಣಾಮದಲ್ಲಿ)
ಹಿತಕರವಾಗುವುದೋ, ಯಾವುದು ಆತ್ಮಬುದ್ಧಿಯ
ಪ್ರಸನ್ನತೆಯಿಂದಿರುವುದೋ, ಅದು
ಸಾತ್ವಿಕ ಪ್ರಕಾರದ ಸುಖ. ಯಾವ ಸುಖವು
ವಿಷಯ ಯಾವುದಾದರೊಂದು ಇಂದ್ರಿಯದೊಂದಿಗೆ
ಅಥವಾ ಮನಸ್ಸಿನ ~~[illegible]~~ ಸಂಪರ್ಕದಿಂ
ಯಾವುದೋ ವಸ್ತುವು (ಪ್ರಾಪಂಚಿಕ ಸಂಗತಿಯು)
ಬಂದದ್ದರಿಂದ (=ಭೋಗದಿಂದ) ಉಂಟಾದುದೋ,
ಯಾವುದು ಆರಂಭದಲ್ಲಿ ಮಧುರವಾಗಿ ತೋರಿದರೂ
ಕೊನೆಗೆ (=ಪರಿಣಾಮದಲ್ಲಿ) ವಿಷಪ್ರಾಯವಾಗಿ
ಪರಿಣಮಿಸಿ (ಪಶ್ಚಾತ್ತಾಪಕರವಾಗಿ) ರುವುದೋ
ಆ ಬಗೆಯ ಸುಖವನ್ನು ರಾಜಸ ವಿಧಾನದ
ಸುಖವೆನ್ನುವರು. ಮೂರನೆಯ ಬಗೆಯ, ಯಾವ
ಸುಖವು ಮೊದಲಿನಿಂದ ಕೊನೆಯವರೆಗೂ
(=ಯಾವಾಗಲೂ) ಮರುಳುಗೊಳಿಸುವದೋ,
ಯಾವ ಸುಖವು ನಿದ್ರೆ, ಆಲಸ್ಯ, ಜಾಡ್ಯ,
39 ಮತ್ತು (ಮದ) ಹಾಗೂ ಅನವಧಾನತೆ
(ಏಕಾಗ್ರಹೀನತೆ) ಗಳಲ್ಲಿ ಹುಟ್ಟುವಸಾನ –

ಹುಟ್ಟುವುದರಿಂದ ಆ ಸುಖವು ತಾಮಸ ಪ್ರಕಾರದ್ದು.

40 ಮೇಲೆ ಉದಾಹರಿಸಿದಂತೆ ನಮ್ಮ ಅನುಭವಗಳಿಗೂ ಜ್ಞಾನಕ್ಕೂ ಎಟುಕುವಂತಹುದೆಲ್ಲವೂ ತ್ರಿಗುಣಾತ್ಮಕವಾಗಿರುತ್ತವೆ. ತ್ರಿಗುಣಗಳಿಂದ ಮುಕ್ತನಾಗದೇ ಇರುವುದು ಯಾವುದೂ ಈ ಮರ್ತ್ಯಲೋಕದಲ್ಲಾಗಲೀ ಸ್ವರ್ಗದಲ್ಲಿರುವ ದೇವತೆಗಳಲ್ಲಾಗಲೀ ಇಲ್ಲ. ಪ್ರಾಕೃತಿಕ ಗುಣಗಳಿಂದ ಹೊರತಾದ ವಸ್ತುವು ಇರಲು ಸಾಧ್ಯವೇ ಇಲ್ಲ. ಮನುಷ್ಯರನ್ನು ಪರಿಗಣಿಸಿದರೆ, ಅವರಲ್ಲಿ ಈಗ ಚಾಲ್ತಿಯಲ್ಲಿರುವ 4 ಜಾತಿಗಳ ವಿಂಗಡಣೆಯಲ್ಲಿಯೂ ಬ್ರಾಹ್ಮಣ,

41 ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರು ಮಾಡುವ ಕರ್ಮಗಳು ಅವರ ಒಳಹುಟ್ಟಿದ ಸ್ವಭಾವಕ್ಕೆ ಅಥವಾ ಗುಣಗಳಿಗೆ ತಕ್ಕಂತೆ ಬಗೆಬಗೆಯಾಗಿರುತ್ತವೆ. ಈ ನಾಲ್ಕು ವರ್ಣದವರ ಬಗೆಬಗೆಯ ಸ್ವಭಾವಗಳು ಅವರವರ ವಿಶಿಷ್ಟ ಕರ್ಮಗಳಲ್ಲಿ ಹೇಗೆ ವ್ಯಕ್ತವಾಗುವುವೆಂಬುದು ನೋಡೋಣ,—

(ಸಹನೆ)

42 ಸ್ಥಿರತೆ, ಸಂಯಮ, ತಪಸ್ಸು, ಶುದ್ಧತೆ,
ಕ್ಷಮೆ, ನೇರವಾದ (ಕಪಟವಿಲ್ಲದ) ನಡೆನುಡಿ,
ವಿದ್ಯೆ, ಪಾರಮಾರ್ಥಿಕ ಜ್ಞಾನ, ದೈವಶ್ರದ್ಧೆ
— ಇವು ಬ್ರಾಹ್ಮಣ ಜಾತಿಯ ಸ್ವಭಾವ ಸಿದ್ಧ
43 ಪ್ರವೃತ್ತಿಗಳಾಗಿ ಹುಟ್ಟಿರುವವು.
ಕ್ಷತ್ರಿಯ ಜಾತಿಗಾದರೋ ಸಾಹಸ, ತೇಜಸ್ಸು,
ಧೈರ್ಯ (ಧೀರತೆ) (ತಾಳಿಕೆ, ಹಿಡಿದ ಛಲ),
ದಕ್ಷತೆ (ಕಾರ್ಯಕ್ಷಮತೆ), ಕಾಳಗ-
ಕಲಹಗಳಲ್ಲಿ ಬೆಂಬಿಗದ ಹಿಂದೆಗೆಯದ
ಆತ್ಮಭಾವನೆ, ದಾನ ಮಾಡುವದರ ಮನಸಾದ
ಔದಾರ್ಯ ಹಾಗೂ ಒಡೆತನ (ಆಳುವ
ಸ್ವಭಾವ) — ಇವು ಅವರ ಸ್ವಭಾವದಲ್ಲಿಯೂ
ಕಾರ್ಯಗಳಲ್ಲಿಯೂ ಪ್ರಕಟವಾಗುತ್ತವೆ.

44 ಮೂರನೆಯದಾದ ವೈಶ್ಯ ಜಾತಿಗೆ
ಕೃಷಿ, ಗೋವು ಮುಂತಾದ ಸಂಪತ್ತುಗಳ
ರಕ್ಷಣೆ ಹಾಗೂ ಅಭಿವೃದ್ಧಿ, ವಾಣಿಜ್ಯ
ವ್ಯಾಪಾರ — ಇವು ಸಮುಚಿತವಾದ
ಗುಣಕರ್ಮಗಳು; ಶೂದ್ರ ಜಾತಿಗೆ
ಸೇವಾಪರತೆಯೊಂದೇ ಸ್ವಭಾವ ಹಾಗೂ
ಕಸುಬುಗಳು. ವಿಶೇಷವಾಗಿರುತ್ತದೆ.

45 ಈ ಜಾತಿಗಳಲ್ಲಿ ಯಾವ ಪಕ್ಷಿಯಂತೆ ಯಾವ ಪದವ
ಸೇರಿಲ್ಲ, ಕೇಳುವ ಅಲ್ಲಿ, ತ್ರಿತೀನಸ್ತ
ಎಂದು ತನ್ನ ಶೀರ್ಷಕ (ಕಪಾಲ) ಗಳಲ್ಲಿ
ನಿರತನಾಗಿದ್ದ, ಕೇಳುವ ಕೃತಕೃತ್ಯತೆ
ಯನ್ನು ಪಡೆಯುವುದು: ಅಂತಹ
ಕೃತಕೃತ್ಯತೆಯನ್ನು ದೊರಕಿಸುವುದು
ಹೇಗೆ, — ಕೇಳು —
ಎಲ್ಲ ಭಾರತ (ಚರಾಚರ ಜಗತ್ತು) ಗಳ
ತ್ರೈಕಾಲಿಕ ಯಾವ ಯಾವ ಪದಾರ್ಥ ಬಂದಿ
ದೆಯೋ, ಎಲ್ಲವನ್ನು ಈ ಸಾಮಾನ್ಯ
ದಾಸನ ಸ್ವೀಕರಿಸಿದೆ ಅದು ಪರಿಶುದ್ಧ
ವಸ್ತು ಸ್ವೀಕಾರಿಸಿದ್ದ ಪರ ಮಾಡಿ ಮಾತ್ರ ಎಲ್ಲ
ತ್ರಿಕಾಲದಲ್ಲಿ ಮಾನವನ ನಿತ್ಯವನ್ನು
(ಕೃತಕೃತ್ಯತೆ, ಸಾರ್ಥಕತೆ, ಧನ್ಯತೆ
ಯನ್ನು) ಹೊಂದುವುದು.
47 ಪರಧರ್ಮವು ವಿಶೇಷ ಉತ್ಕೃಷ್ಟವಾಗಿ ಕಂಡು
ಬಂದರೂ, ಅಪ್ರಯೋಜಕ (ಗುಣ-ಹೀನ
ವ) ವಾದ್ದು ಆದಂತೆ, ಸ್ವಧರ್ಮವು ಕಂಡು
ಬಂದರೂ ಸ್ವಧರ್ಮವನ್ನು ಶ್ರೇಷ್ಠವೆನಿಸು,
ಸ್ವಧರ್ಮಾಚರಣೆಯಿಂದಲೇ ಪ್ರತಿಯೊಬ್ಬನ

ಶ್ರೇಯಸ್ಸು (ಉತ್ಕೃಷ್ಟ, ಪ್ರಗತಿ) ಹುಡುಕಿದರೆ,
ತನ್ನ ಸ್ವಭಾವದಲ್ಲಿಯೇ ಹುಡುಕಿದರೆ
ತನ್ನ ಸಹಜ ಕರ್ಮವನ್ನು ~~ಬಿಟ್ಟುಬಿ-~~
~~ಟ್ಟು~~ ಬಿಟ್ಟುಬಿಡುತ್ತ, ಬೇರೆ ಜಾತಿ
ವ್ಯಕ್ತಿಗೆ ಯೋಗ್ಯವಾದ ಕಾರ್ಯವು ತಪ್ಪದು,
ಯಾವ ಪಾಪವೂ ಉಂಟದು.
ತನ್ನ ಸಹಜವಾದ ಕರ್ಮವನ್ನು ಬಿಡದೆ
ಬೇರೆ ದೋಷಯುಕ್ತವಾಗಿರುವಂತೆ
ಗೋಚರಿಸಿದರೂ ಅದನ್ನು ಕೈಬಿಡ
ಬಾರದು. ಪ್ರತಿಯೊಂದು ಕೆಲಸದಲ್ಲಿಯೂ
ಎಲ್ಲ ವ್ಯವಹಾರಗಳಲ್ಲಿಯೂ ಏನಾದರೊಂದು
ದೋಷವಿದ್ದೇ ಇರುತ್ತದೆ, ಬೆಂಕಿಯು
ಸುತ್ತ ಹೊಗೆಯು ಇರುವ ಹಾಗೆ.
[ಬೆಂಕಿಯನ್ನು ಹೊಗೆಯು ಮುಸುಕಿದ ಹಾಗೆ ಸಕಲ
ಕರ್ಮಗಳಲ್ಲಿಯೂ ದೋಷವಿದ್ದೇ ಇದೆ (ಕರ್ಮದ
ಆರಂಭ ದೋಷ). ಆದರೆ ತನ್ನ ಸ್ವಭಾವದಿಂದ
ಗೊತ್ತಾಗಿರುವ ಕರ್ಮವನ್ನು ಮಾಡಿದರೆ ಪಾಪವು
ಉಂಟಾಗದು. ತನ್ನ ಕರ್ಮವು ದೋಷಯುಕ್ತವೆಂಬ
ಭಾವನೆಯಿಂದ ಅದನ್ನು ಬಿಟ್ಟು ಅನ್ಯರ ಕರ್ಮ
ಕೈಗೊಂಡರೆ, ಕರ್ಮಮಾತ್ರದಲ್ಲಿ ದೋಷವಿದ್ದೇ

ಇಲ್ಲಿನ
ಶ್ರೀಮತ್ಪ್ರವರಂದ ~~*~~ ಸಹಜ ವಾಕ್ಯ ವೊಂದಿಗೆ
ಕರ್ಮ ಶಾಸ್ತ್ರವನ್ನು ಎರಡು ವಾಕ್ಯಗಳಲ್ಲಿ
ಸಂಗ್ರಹಿಸುತ್ತದೆ. ತಾನ ಕರ್ಮ ಪ್ರವೃತ್ತಿ ನಾಗದೆ
ತನ್ನ ಕರ್ಮವನ್ನೇ ಮಾಡಿದರೆ ಸ್ವರ್ಗವು
ಉತ್ತಮ ಜನ್ಮವು ದೊರಕುತ್ತದೆ; ಅದನ್ನ
(= ಅದರ ಫಲವನ್ನು) ಭಗವಂತನಿಗೆ ಅರ್ಪಿಸಿದರೆ
(ಅದು ಭಗವಂತನ ಪೂಜೆ ಮಾಡಿದರೆ) ಜ್ಞಾನನಿಷ್ಠೆಗೆ
ತಕ್ಕ ಯೋಗ್ಯತೆಯು ಸಿದ್ಧಿಸುತ್ತದೆ]

49. ಯಾವ ಮನುಷ್ಯನು ಕರ್ಮ ಆರಂಭಿಸುವುದಿಲ್ಲವೋ, ಅವನನ್ನು
ಅಧ್ಯಾ. ಗೆಲುವು ಪ್ರವರ್ತಕ ಇನ್ನೊಂದರ ಬಗ್ಗೆ ಹೇಳಿಲ್ಲ
III, 4 ಕ್ರಿಯಾಶೀಲನಾಗದವನು ಸನ್ಯಾಸಿಯಾದ ಮಾತ್ರಕ್ಕೆ
ನೈಷ್ಕರ್ಮ್ಯವೆಂಬ ಪರಮ ಸಿದ್ಧಿಯನ್ನು ಪಡೆಯುವನು
ಈ ಸಿದ್ಧಿಯನ್ನು ಪಡೆಯುವನು ಅತ್ಯಂತಿಕವಾದ
ಪ್ರಸಿದ್ಧ ಪರಮಪದವನ್ನು ಹೊಂದಲು
ಪಡೆಯಬಲ್ಲೆನೋ ಎಂಬುದನ್ನು ನಾನೀಗ ಹೇಳುವ
ಇಲ್ಲಿ ನಿನಗೆ ತಿಳಿಸುತ್ತೇನೆ, ಅರ್ಜುನ. ಈ
ಮಾರ್ಗವು ಮುಖ್ಯವಾಗಿ ಜ್ಞಾನದ ಅಂಗವಾದ
ನೀತಿ. ~~[illegible]~~ ಅದು ಹೇಗೆ: ಪರಿಶುದ್ಧವಾದ
ಬುದ್ಧಿಯಿಂದ ಧ್ಯಾನಿಸುವುದು, ಸರ್ವೇಂದ್ರಿಯ ನಿಗ್ರಹ

ಧೃತಿಯಿಂದ ತನ್ನನ್ನು ದಮಿಸಿಕೊಂಡು, ಶಬ್ದ, ಸ್ಪರ್ಶ
ಮುಂತಾದ ವಿಷಯಗಳನ್ನು ತ್ಯಜಿಸಿ (ತೊರೆದು)
ರಾಗ-ದ್ವೇಷಗಳಿಲ್ಲದೆ, ಏಕಾಂತಪ್ರಿಯನಾಗಿದ್ದು-
ಕೊಂಡು, ಕನಿಷ್ಠ ಆಹಾರ ಸೇವಿಸುತ್ತಾ,
ಮಾತು, ಚಿಂತನೆ ಹಾಗು ಕೆಲಸಗಳನ್ನು
ನಿಯಂತ್ರಿಸಿ, ಸದಾ ಧ್ಯಾನಸಂಯೋಗಪರನಾಗಿದ್ದು
ವೈರಾಗ್ಯವನ್ನವಲಂಬಿಸಿ, ಅಹಂಕಾರ, ಬಲ
(ಬಿತ್ತರ), ದರ್ಪ, ಕಾಮ, ಕ್ರೋಧ ಹಾಗು
ಸಂಗ್ರಹ ಮಾಡುವುದನ್ನು ತೊರೆದು, ನಿರ್ಮಮ
ನಾಗಿ, ಶಾಂತನಾಗುವವನು ^ಬ್ರಹ್ಮ ಸ್ವರೂಪನಾಗುವುದಕ್ಕೆ (ಬ್ರಹ್ಮ ಪದವಿಗೆ)
ಯೋಗ್ಯನಾಗುತ್ತಾನೆ (ತಕ್ಕವನಾಗುವನು)
[ಜ್ಞಾನದಿಂದ ಆತ್ಮತೃಪ್ತನಾದ ಬ್ರಹ್ಮವೇ
ತಾನೆಂಬ ಅರಿವಿನಲ್ಲಿ ನೆಲೆಯನ್ನು ಹೊಂದುವ
ಕ್ರಿಯೆಯನ್ನು ಇಲ್ಲಿ ತಿಳಿಸಲಾಗಿದೆ]

ಬಳಿಕ ಬ್ರಹ್ಮಭೂತನಾಗಿಬಿಟ್ಟನೆಂದರೆ ಆ ವ್ಯಕ್ತಿ
ಅವನು ಪ್ರಸನ್ನಾತ್ಮನಾಗಿಬಿಡುವನು; ಅವನು
ಏನನ್ನೂ ಯಾವುದಕ್ಕೂ ಚಿಂತಿಸನು, ಯಾವುದನ್ನೂ
ಬಯಸನು. ಅವನಿಗೆ ಎಲ್ಲವೂ ಎಲ್ಲರೂ
ಸಮಾನವು, ಅವನಿಗೆ ಭಗವಂತನ ಶ್ರೇಷ್ಠತಮ

ವಾದ ಭಕ್ತಿಯಿಂದ ಪಡೆಯುವನು. ಆ ಭಕ್ತಿ
ಯಿಂದಾಗಿಯೇ ಅವನು ಪರಮಾತ್ಮನ
ಸ್ವರೂಪವನ್ನು ಸರಿಯಾಗಿ ತಿಳಿಯುತ್ತಾನೆ.
ಪರಮಾತ್ಮನು ಎಷ್ಟರವನು, ಯಾರವನು
ಎಂಬುದನ್ನು ಸಮರ್ಪಕವಾಗಿ ತಿಳಿದುಕೊಂಡ
ಆ ಭಕ್ತನು / ಜ್ಞಾನಿಯು ಕ್ರಮೇಣ
ಭಗವಂತ ನೊಳಗೆ ಸೇರಿಕೊಳ್ಳುವನು.
(ಎಲ್ಲವೂ ಆಗಿರುವ ಅವನು ಯಾರು
ಎಂಬುದು ಅಂತಹವನಿಗೆ ಮಾತ್ರ ಗೊತ್ತು)
ಭಾಗವತನು, ಭಗವಂತನನ್ನೇ ಆತುಕೊಂಡು ಸದಾ
ಎಲ್ಲ ಕೆಲಸಗಳನ್ನೂ ನಿರ್ವಹಿಸುತ್ತಾ
ಇರುವವನೊಬ್ಬ ಅಂತಹವನು ಶಾಶ್ವತ ಪದವನ್ನು
ಪಡೆಯುವನು. ಆದ್ದರಿಂದ ಮನಸ್ಸನ್ನು
57 ಕೆಲಸಗಳಲ್ಲಿ ತೊಡಗಿಸದೆ, ಅದನ್ನು ಸದಾ
ಭಗವಂತನ ಕಡೆ ತಿರುಗಿಸುವ ಬುದ್ಧಿ
ಯೋಗದ ಸಹಾಯದಿಂದ ಸತತವಾಗಿ
ಪರಮಾತ್ಮ ಚಿತ್ತನಾಗಿರು. ಹಾಗೆ ಭಗವಂತ
58 ಚಿತ್ತನಾಗಿದ್ದವನು ಎಲ್ಲ ಕಷ್ಟಕೋಟಲೆ
ಗಳನ್ನು ಬಹಳ ಸುಲಭವಾಗಿ
ನೀನು ದಾಟಬಲ್ಲೆ

58 ಇದಕ್ಕೆ ಹೀಗಾಗಿ ನೀನೇನಾದರೂ ನಿನ್ನ ಅಹಂಕಾರ
ದಿಂದಾಗಿ ಇದಕ್ಕೆ ಬದಲಾದಿದ್ದರೆ ಅದೇ
ಕಾರಣಕ್ಕೆ ನೀನು ನಾಶವಾಗಿ ಹೋಗುವೆ. ಆ
59 ಅಹಂಕಾರವು ಪ್ರಬಲವಾದದ್ದು ಎಂದು ನೀನು
ಈಗ 'ನಾನು ಯುದ್ಧ ಮಾಡುವುದಿಲ್ಲ' ಎಂದು ದೃಢ
ನಿಶ್ಚಯ ನಿನ್ನ ಅಂತಹ ಪ್ರಯತ್ನವು
ಮಿಥ್ಯೆಯಾಗುವುದು ಏಕೆಂದರೆ ಮತ್ತೆ
ನಿನ್ನ ಪ್ರಕೃತಿಯೇ ನಿನ್ನನ್ನು ಕಾದಲು
ಪ್ರೇರೇಪಿಸುವುದು. ಏಕೆಂದರೆ,
ಕೌಂತೇಯ ಪ್ರತಿಯೊಬ್ಬರೂ ಅವರವರ
ಪ್ರಕೃತಿಗೆ, ಸ್ವಭಾವಕ್ಕೆ ಬದ್ಧರು (ಕಟ್ಟು
ಬಿದ್ದವರು), ಅವರವರ ಕರ್ಮಕ್ಕೆ
ಬದ್ಧರು. ಹೀಗಾಗಿ ನೀನೊಂದು ವೇಳೆ
ಮರುಳುತನ (ಮೋಹ) ದಿಂದಾಗಿ
ಯಾವುದನ್ನು ಮಾಡಲು ಹಿಂಜರಿಯುತ್ತೀಯೋ
ಅದನ್ನೇ ಪರವಶನಾಗಿ ನೀನು
ಮಾಡುವಂತಾಗುತ್ತದೆ. ಎಲ್ಲ ಜೀವಿಗಳ
61 ಒಡಲಲ್ಲಿ ಈಶ್ವರನಿದ್ದಾನೆ. ಆತ ನಿಂತಾಗ
ಮಾಯೆ ಎಲ್ಲ ಜೀವಿಗಳನ್ನೂ ಕೂಡ
ಬಾಳಿಕ ನಿಂದ ಯಂತ್ರವು ತಿರುಗೋದಾಗೆ

ತಿರುಗಿಸುತ್ತಿರುತ್ತಾನೆ. ಆ ಪರಮಾತ್ಮನನ್ನು
ಎಲ್ಲ ಬಗೆಯಿಂದ ಮೊರೆ ಹೋಗು,
ಅವನ ಕೃಪೆಯಿಂದ ಮಾತ್ರವೇ ಪರಮ
62 ಶಾಂತಿಯನ್ನೂ ಶಾಶ್ವತ ಪದವಿಯನ್ನೂ
ನೀನು ಪಡೆಯಬಲ್ಲೆ. ಇದೇ
ನಾನು ನಿನಗೆ ಬೋಧಿಸುತ್ತಿರುವ
63 ಜ್ಞಾನ; ಇದು ಬಹಳ ರಹಸ್ಯವಾದದ್ದು.
ಇದನ್ನು ನಿನಗೆ ನೀಡಿದ್ದೇನೆ. ಇನ್ನು ಇದನ್ನೆಲ್ಲ
ವಿಮರ್ಶಿಸಿ ನಿನಗೆ ಹೇಗೆ ಇಷ್ಟವೋ ಹಾಗೆ
ಮಾಡು. ಇನ್ನೊಂದೇ ಬಾರಿ ಕೊನೆಯದಾಗಿ
64 ಈ ರಹಸ್ಯತಮವಾದ ವಿಷಯವನ್ನು ನಿನಗೆ ಹೇಳುತ್ತೇನೆ, ಅರ್ಜುನ, ಗಮನವಿಟ್ಟು ಕೇಳು, ನೀನು
ನನಗೆ ತುಂಬ ಆತ್ಮೀಯನಾದದ್ದರಿಂದಲೇ ನಿನಗೆ
ಹಿತವಾದದ್ದನ್ನೇ ಹೇಳುತ್ತೇನೆ. ನನ್ನಲ್ಲಿಯೇ ಮನಸ್ಸಿಡು,
65 ನನಗೆ ಶರಣಾಗು, ನನ್ನ ಭಕ್ತನಾಗು, ನೀನು
ನನ್ನಲ್ಲಿಯೇ ಐಕ್ಯನಾಗುವೆ, ನೀನು ನನಗೆ
ಅತ್ಯಂತ ಪ್ರಿಯನಾಗಿದ್ದೀ. ನಿನಗೆ ಹಿತಕರವಾದ್ದನ್ನೇ
ನಾನು ಹೇಳುವೆನು. ನಾನು ಹೇಳಿದ ವಿಧಿಗಳ
(ಕುಲಧರ್ಮ ಜಾತಿ) ಎಲ್ಲವನ್ನೂ ಕೈಯಿಂದ ಬಿಟ್ಟವನಾಗಿ
ನೀನು ವಿಮರ್ಶೆಗೊಳಗೊಳ್ಳಬೇಡ


ನಾನು ಹೇಳಿದಷ್ಟನ್ನೇ ಮಾಡು, ನಿನಗೆ ಒಳ್ಳೆಯ
ದಾಗುತ್ತದೆಂದು ಪ್ರಮಾಣ ಮಾಡಿ ಹೇಳುತ್ತೇನೆ
ಲೋಕದಲ್ಲಿ ಹಲವು ಧರ್ಮಗಳುಂಟು, ಅವುಗಳ
ತಾರತಮ್ಯದ ಚಿಂತೆ ಬೇಕೆಂದು ಅದರ ಗೋಜೇ
ನಿನಗೆ ಬೇಡ, ನನ್ನಲ್ಲಿ ಶರಣಾಗು, ಅಷ್ಟೇ
ಸಾಕು. ನಿನ್ನನ್ನು ಎಲ್ಲ ಪಾಪಗಳಿಂದ ನಾನು
ಮುಕ್ತನನ್ನಾಗಿ ಮಾಡಿ, ಉದ್ಧರಿಸುವೆನು, ವೃಥಾ
ಯೋಚನೆ ಮಾಡಬೇಡ. ನಿನಗೆ ನಾನು
ಉಪದೇಶಿಸಿದ ರಹಸ್ಯವನ್ನು ಪವಿತ್ರವಾದ ಮನಸ್ಸಿ
ನಿಂದ ಕೇಳಿದವರು ಆದರೆ ನಿತ್ಯವೂ
ತಪಸ್ಸುಮಾಡದವನಿಗೆ, ಭಕ್ತನಲ್ಲದವನಿಗೆ,
ಸೇವಾಪರನಲ್ಲದವನಿಗೆ ಹಾಗೂ ಭಗವಂತ-
ನನ್ನ ದ್ವೇಷಿಸುವವನಿಗೆ ಎಂದೆಂದಿಗೂ
ನೀಡಲಾಗದು. ನನ್ನಲ್ಲಿಯೇ ನಿತ್ಯವಿರುವ
ಅಂಥಾ ನನ್ನ ಭಕ್ತರಿಗೆ ಈ ಗಹನವಾದ
ಬೋಧನೆಯನ್ನು ಮಾಡಿದವರು ನನ್ನಲ್ಲಿ
ನಿಶ್ಚಲವಾದ ಭಕ್ತಿಯುಳ್ಳ, ಇದ್ದುದರಿಂದ
ಕೊನೆಗೆ ನನ್ನಲ್ಲಿಯೇ ಸೇರಿ ಹೋಗುವರು,
ಇದರಲ್ಲಿ ಸಂಶಯ ಬೇಡ. ಹಾಗೆ ಮಾಡುವ-
ವರಿಗೆ ನನಗೆ ಮನುಷ್ಯರ ಪೈಕಿ

ನನಗೆ ಅತ್ಯಂತ ಪ್ರಿಯವಾದದ್ದನ್ನು ಮಾಡಿದ
ವನಾಗುತ್ತಾನೆ ಹಾಗು ಭೂಮಿಯ ಮೇಲೆ
ಅಂತಹವರಿಗಿಂತ ಮೆಚ್ಚಿನವರು ನನಗೆ ಇನ್ನೊಬ್ಬರು
ಕಂಡುಬರಲಾರರು. ಧರ್ಮರಹಸ್ಯವನ್ನು ಕುರಿತ
70. ನಮ್ಮಿಬ್ಬರ ಈ ಸಂವಾದವನ್ನು ಕೂಡ ~~ಮಾಡು~~
ಯಾವಾತನು ಅಧ್ಯಯನ ಮಾಡುವನೋ
ಅವನು ಮಾಡುವ ಆ ಜ್ಞಾನಯಜ್ಞದಿಂದ ~~ನನಗೆ~~
~~ತುಂಬಾ ಇಷ್ಟವಾಗುತ್ತದೆ~~ ನನಗಾಗಿ ಯಾಗಮಾಡಿದ
ಎಂದೇ ನನ್ನ ಅಭಿಪ್ರಾಯ. ಮೇಲ್ಕಂಡಂತೆ ~~ಈ~~
71. ತತ್ವದ ಅಧ್ಯಯನ ಅಥವಾ ಪಠನ ಮಾಡುತ್ತಿರು
ವುದನ್ನೇ ಆಗಲಿ ಯಾವಾತನು ಶ್ರದ್ಧೆ
ಯಿಂದಲೂ ಕಿಚ್ಚು ಭಾವನೆಗಳಿಲ್ಲದೆಯೂ
ಕೇಳುವನೋ ಅಂತಹವನು ಬಿಡುಗಡೆ
ಹೊಂದಿ ಪುಣ್ಯಕರ್ಮಿಗಳು ಪಡೆಯುವ
ಶುಭಕರವಾದ ಲೋಕಗಳನ್ನೇ ಪಡೆಯುವನು
ಅರ್ಜುನ, ~~ಈವರೆಗೂ~~ ನಾನು ಹೇಳಿದುದನ್ನು
ನೀನು ಏಕಾಗ್ರ ಚಿತ್ತನಾಗಿ ಆಲಿಸಿದೆಯಾ?
ಇದರಿಂದ ನಿನ್ನ ಮರುಳು ಹಿಡಿದಿದ್ದ ಬುದ್ಧಿ
ಯ ಮೋಹವೇನಾದರೂ ತೊಲಗಿತೇನು
ಎಂದು ಶ್ರೀಕೃಷ್ಣನು ಪ್ರಶ್ನಿಸಿದನು.

ಇದಕ್ಕೆ ಅರ್ಜುನನು ಸ್ಫುಟವಾಗಿ ಹೇಳಿದನು
ಅಚ್ಯುತ, ~~ನನ್ನ ಮೋಹವೆಲ್ಲ~~ ನನಗೆ
ಕವಿದಿದ್ದ ಮೋಹವೆಲ್ಲ ತೊಲಗಿತು, ನನ್ನ
ಸ್ಮರಣೆ ಮತ್ತೆ ದೊರಕಿದೆ, ಇವೆಲ್ಲ ನಿನ್ನ
ಕೃಪೆಯಿಂದ ಆದುದು. ನನ್ನ ಎಲ್ಲಾ ಸಂದೇಹ
~~ಸಂದೇಹಗಳೆಲ್ಲ~~ ಗಳೆಲ್ಲ ದೂರವಾದುವು. ನಾನು
~~ಈಗ~~ ಮುಕ್ತನಾಗಿದ್ದೇನೆ. ದೃಢ ಬುದ್ಧಿಯಿಂದಿ
ರುವ ನಾನಿನ್ನು ನೀನು ನುಡಿದಂತೆಯೇ ನಡೆ
ಯುವೆನು

ಎಂದು ಮುಂದಿನ ಕರ್ತವ್ಯಕ್ಕೆ
ಉದ್ಯುಕ್ತನಾದನು. ಎಂಬುದಾಗಿ ನುಡಿದ
ಸಂಜಯನು ಧೃತರಾಷ್ಟ್ರನಿಗೆ ಈ ರೀತಿಯಾಗಿ
74 ಅದ್ಭುತ ಸಂವಾದವನ್ನು ಹೀಗೆ ಅರುಹಿದನು
ಈ ವಾಸುದೇವ ಹಾಗೂ ಅರ್ಜುನರ ಈ
[illegible]
ಅಸಾಧಾರಣವಾದ ಅತಿ ರೋಮಾಂಚಕರ
ವಾದ ಈ ಸಂವಾದವನ್ನು ನಾನು ಆಲಿಸಿದೆನು
ಮಹಾತ್ಮರಾದ ವ್ಯಾಸರ ಮಹತ್ತರ ಕರುಣೆಯಿಂ
ದಾಗಿಯೇ ಈ ರಹಸ್ಯವೂ ಶ್ರೇಷ್ಠವೂ ಆದ
ಬೋಧನೆಯು ನನಗೆ ಕೇಳಲು ದೊರಕಿತು.
ಧೃತರಾಷ್ಟ್ರ ಮಹಾರಾಜ! ಯೋಗೇಶ್ವರನಾದ ಶ್ರೀ ಕೃಷ್ಣನೇ ಸ್ವಯಂ

ಈ ಯೋಗ ವಿಚಾರವನ್ನು ಬಣ್ಣಿಸುತ್ತಿರುವು
ದನ್ನು ನಾನು ಮತ್ತೆ ಮತ್ತೆ ನೆನಪು ಮಾಡಿ
ಕೊಂಡಷ್ಟು ಆ ಶ್ರೀಕೃಷ್ಣ-ಅರ್ಜುನರ ನಡುವೆ
ಜರುಗಿದ ಪಾವನವೂ ಅದ್ಭುತವೂ ಆದ
ಸಂವಾದದಿಂದ ಹರ್ಷಪಡುತ್ತೇನೆ ದೊರೆಯೇ.
77 ಅವರ ಚರ್ಚೆಯನ್ನು ನೆನಪು ಮಾಡಿಕೊಂಡಷ್ಟು
ಶ್ರೀ ಹರಿಯ ಅತ್ಯದ್ಭುತವಾದ ಆ ವಿಶ್ವರೂಪ
ವನ್ನು ಸ್ಮರಿಸಿದಷ್ಟು ನನಗೆ ಹೆಚ್ಚು ಹೆಚ್ಚಿನ
ವಿಸ್ಮಯವುಂಟಾಗುತ್ತಿದೆ, ಮತ್ತೆ ಮತ್ತೆ
ಹರ್ಷಾತಿರೇಕವಾಗುತ್ತಿದೆ. ಇದು ಸತ್ಯ,
ಎಲ್ಲಿ ಯೋಗೇಶ್ವರ ಶ್ರೀಕೃಷ್ಣನಿದ್ದಾನೋ ಹಾಗೂ
ಎಲ್ಲಿ ಧನುರ್ಧಾರಿಯಾಗಿ ಪಾರ್ಥನು
ಇರುತ್ತಾನೋ, ಅವರಿರುವಲ್ಲಿ ಸೌಭಾಗ್ಯ,
ವಿಜಯ, ಅಭ್ಯುದಯ ಮತ್ತು ನೀತಿಗಳು
ನೆಲೆಸುವವೆಂದು ನನ್ನ ಅಭಿಪ್ರಾಯ



14 [3] 10 + 4

3 × 4 = 12

22

48

27

224827